ಸಿ.ಡಬ್ಲ್ಯೂ.   6   ಪಿ.ಡಬ್ಲ್ಯೂ.4

ಸಿ.ಸಿ. ನಂ.  811/2016

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ  20-04-2024.

**ಮುಂದವರೆದ ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು 4 ಲಕ್ಷ ರೂ.ಯನ್ನು ಚಾಸಾ4 ರವರಿಗೆ ಕೈಗಡ ಸಾಲ ಕೊಟ್ಟಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ  ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಪೋಲಿಸರು ಯಾವುದೇ ವಿಚಾರಣೆ ಮಾಡಿರುವುದಿಲ್ಲ. ನನಗೆ ಈ ಪ್ರಕರಣದ ಆರೋಪಿತರ ಪರಿಚಯ ಇರುವುದಿಲ್ಲ. ನಾನು ಈ ಪ್ರಕರಣದ ಆರೋಪಿತರನ್ನು ಯಾವತ್ತೂ ನೋಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)**

**ಪಾಟೀ ಸವಾಲು ಃ-   ಸ.ಸ.ಅ. ರವರಿಂದಃ**

ನಾನು ದಿಃ 23-01-2016 ರಂದು ನಾನು ಪೊಲೀಸರ ಮುಂದೆ ಹೇಳಿಕಕೆ ನೀಡಿರುತ್ತೇನೆ ಎಂದರಸ ರಿಯಲ್ಲ. ಈಗ ಓದಿ ಹೇಳಲಾದಂತೆ -

**" ನಾನು ಮೇಲ್ಕಂಡ ವಿಳಾಸದ  ನಿವಾಸಿತನಿದ್ದು ----- –-------------------------- ನಮಗೆ ಕೆಲಸದ ಅಮಿಷ  ತೋರಿಸಿ, ತಮ್ಮ ಖಾತೆಗಳಿಗೆ ಹಣ ಹಾಕುವಂತೆ  ಅಪ್ರಾಮಾಣಿಕವಾಗಿ ಪ್ರೇರೇಪಿಸಿ, ಹಣ ಸಂದಾಯ ಮಾಡಿಕೊಂಡು, ನಮಗೆ ಕೆಲಸವನ್ನು  ಕೊಡದೇ ಮತ್ತು ನಾವು ಸಂದಾಯ ಮಡಿದಂತಹ ಹಣವನ್ನು ನಮಗೆ ಮರಳಿ ಕೊಡದೇ ಒಟ್ಟು ರೂಪಾಯಿ 1,22,39,000/-  ಹಣ ಬ್ಯಾಂಕ್ ಮುಖಾಂತರ ಪಡೆದು ನಮಗೆ ವಂಚನೆ ಮಾಡಿರುತ್ತಾರೆ.”** ಎಂದು ಹೇಳಿಕೆಯನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.  ಸದರಿ ಹೇಳಿಕೆಯನ್ನು ನಿ.ಪಿ. 55 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಈ ಪ್ರಕರಣದ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.